ವಾರದ ಸಂಚಿಕೆ
Reg No. M 129
Daily & Weekl
For All Kin ls of
Priating & Bin.ling
The
Satyavadi
Press

SATYAVADI—Oldest Newspaper of Mysore

ಸತ್ಯವಾದಿ

ಸಂಪುಟ 26 ಸಂಚಿಕೆ 320] ಶನಿವಾರ 26—6—1943 [6 ಪೈ

ಹೆಚ್. ಆರ್. ಜಿ. ಸಿ. ಯವರ
ಶ್ರೀ ಪಿಕ್ಚರ್ಸ್
ತಯಾರಿಕೆ
ವಾಣಿ OR
[Violinist]
ಎಂಬ ಕನ್ನಡ ನಾಮಾಜಿಕ ಚಿತ್ರ
ನಿಮ್ಮ ಮನರಂಜನೆಗಾಗಿ ಬೇಗನೆ ಬರಲಿದೆ

ಬಾಂಬು ಧಾಳಿಯಿಂದ ಪ್ರಯೋಜನವೇ ?

ಮಿತ್ರಸಕ್ಷದವರು ಪಶ್ಚಿಮ ಯೂರೋಪಿನ ಮೇಲೆ ಆ ವರ್ಷ 60 ಜಾರಿಂದ ವಿಮಾನವನ್ನು ಕಳಿಸಿಕೊಂಡರು. ಇದರಿಂದ ವಿಮಾನ ಧಾಳಿಯಿಂದ ಏನು ಪ್ರಯೋಜನವೆನ್ನಬಹುದು. ನಿಜ, ಇಷ್ಟೂ ಮಿತ್ರ ಪಕ್ಷದವರಿಗೆ ನಷ್ಟವಾಯಿತು. ಆದರೆ ತಾವು ಕಳುಹಿಸಿದ ವಿಮಾನಗಳಲ್ಲಿ ಸೂರಕ್ಕೆ 10 ರಂತೆ ವಾಪಸು ಬಂದಿಲ್ಲವೆಂದು ಗೊತ್ತಿದೆ ಜರ್ಮನಿಯವರು ಹಿಂದೆ ಇಂಗ್ಲೆಂಡಿನಮೇಲೆ ಧಾಳಿಮಾಡಿದಾಗ ಇನ್ನೂ ಹೆಚ್ಚಾಗಿ ವಿಮಾನಗಳು ನಾಶವಾದ್ದರಿಂದ ಗೋರಿಂಗ್ ಈಗ ಇಂಗ್ಲೆಂಡಿನಮೇಲೆ ಹೆಚ್ಚಾಗಿ ಧಾಳಿಮಾಡಲು ವಿಮಾನಗಳನ್ನು ಕಳಿಸಿಲ್ಲ. ಬ್ರಿಟಿಷರು ಜರ್ಮನಿಯಮೇಲೆ ಧಾಳಿಮಾಡುತ್ತಿರುವುದರಿಂದ ಬ್ರಿಟಿಷರವರಿಗೆ ಆಗುವ ಪ್ರಯೋಜನಗಳು ಯಾವುವೆಂದರೆ—1. ಜರ್ಮನಿಯವರ ತಮ್ಮಲ್ಲಿರುವ ವಿಮಾನಗಳಲ್ಲಿ 5 ರಲ್ಲಿ 4 ಪಾಲು ಪಶ್ಚಿಮ ರಣರಂಗದಲ್ಲಿ ಉಪಯೋಗಿಸುತ್ತಿರುವುದು. 2. ಫ್ರಾನ್ಸ್ ಕಾವಲಿಗೆ ಅನೇಕ ವಿಮಾನಗಳು ಅಲ್ಲಿರುವುವು. 3. ಟ್ಯುನಿಷಿಯಾದಲ್ಲಿ ಜರ್ಮನಿಯ ಆಪಜಯಕ್ಕೆ ವಿಮಾನ ಅಲ್ಪರೀತಿಯಲ್ಲಿ ಕಾರಣವಾಯಿತು. 4: ಕೇಂದ್ರ ಸ್ಥಳಗಳನ್ನು ನಾಶಮಾಡುವುದರಿಂದ ವಿಮಾನ ತಯಾರು ಮಾಡುವುದಕ್ಕೆ ಅಡ್ಡಿಮಾಡುವುದು.

ವಿಮಾನ ಧಾಳಿಯಿಂದಲೇ ಯುದ್ಧಗೆಲ್ಲಲು ಆಗುವುದಿಲ್ಲ. ಧಾಳಿಯನ್ನು ಎಡಬಿಡದೆ ದೊಡ್ಡ ಸಂಖ್ಯೆಯಲ್ಲಿ ಭಾರಿ ಬಾಂಬುಗಳನ್ನು ಹಾಕುತ್ತಿರಬೇಕು. ಹೀಗೆ ಮಾಡುವುದರಿಂದ ಶತ್ರುಗಳು ಯುದ್ಧೋದ್ಯಮ ಸಾಮಗ್ರಿಯನ್ನು ತಯಾರುಮಾಡಿಕೊಳ್ಳಲು ಅನಾನುಕೂಲವಾಗುವುದು. ಇದರಿಂದ ಶತ್ರುವನ್ನು ಓಡಿಸಿದರೆ ಪುನಹ ಅವರು ಮುತ್ತುವಂತೆ ಆಗುವುದಿಲ್ಲ. ಜೂನ್ ತಿಂಗಳಲ್ಲಿ 1942ನೇ ಮೇ ಅಂತ್ಯದಲ್ಲಿ ಒಲವಾದ ಧಾಳಿ ಮಿತ್ರರು ಮಾಡಿದಾಗ ಇನ್ನೂ ಹೆಚ್ಚಾಗಿ ಅನೇಕ

ಈವಾರದ ಕಥೆ—

ಸ್ವಯಂಕೃತಾಪರಾಧ

(ಕಳೆದ ವಾರದ ಸಂಚಿಕೆಯಿಂದ ಮುಂದುವರಿದದ್ದು)

ಇಂತಹ ಅವೇಳೆಯಲ್ಲಿ ಇಲ್ಲಿರಕ್ಕಿದ್ದೇ ಅಲ್ಲ, ಎಂದು ಹೇಳಿಕೊಂಡು, ಪ್ರಯತ್ನಮಾಡಿ ಮೇಲಕ್ಕೆ ಹತ್ತಿ, ತಡವರಿಸುತ್ತಾ ಕೋಟೆಯ ಗೋಡೆಯ ಕೆಳಗೆ ಸಿಕ್ಕಿದ್ದರಿಂದ, ಅಯ್ಯೋ ದಾರಿತಪ್ಪಿತು ಇನ್ನೇನು ಗತಿ ಈ ಕುರುಡನಿಗೆ ಇನ್ನು ಊರಿನ ಮಾರ್ಗ ದೊರೆಯುವುದೇ ಎಂದು ಮುಂತಾಗಿ ಯೋಚಿಸುತ್ತಿರುವ ಸಮಯಕ್ಕೆ ಕರಣೀಕ ಭೀಮಣ್ಣನವರು ಯಾರ ಸಂಗಡಲೋ ಘಟ್ಟಿಯಾಗಿ ಮಾತಾಡುತ್ತಿರುವ ಶಬ್ದವು ಕೇಳಬಂದಿತು.

ಆಗ ಮೂರ್ತಿಯು, ಇನ್ನು ಮೌನವಾಗಿದ್ದರೆ ನಿರ್ವಾಹವಾಗತಕ್ಕದ್ದಿಲ್ಲ [ಆಪತ್ಕಾಲೇ ನಾಸ್ತಿ ಮರ್ಯ್ಯಾದಾ] ಅವುದಾದರೊಂದು ಉಪಕಾಯವನೆಸಿತ್ತಿ ಈ ವಿಪತ್ತಿನಿಂದ ಪಾರಾಗಬೇಕು. ಯಾವ ಉಪಾಯ (ಎಂದು ಸ್ವಲ್ಪ ಹೊತ್ತು ಯೋಚಿಸಿ) ಸರಿ ಸರಿ ಗೊತ್ತಾಯಿತು, ಈ ಬೆಕ್ಕಿನಿಂದ ಕೊಟೇ ಗೋಡೆಯನ್ನು ಬಲವಾಗಿ ಬಡಿಯುತ್ತಾ, ಒಂದು ಎರಡು ಮೂರು ಎಂದು ಘಟ್ಟಿಯಾಗಿ ಹೇಳುತ್ತಿರಬೇಕು. ಈ ಶಬ್ದವು ಮಾವನವರಿಗೆ ಬೀಳುತ್ತಲೇ ಯಾರೋ ಮೊಜ್ಜೀದಾರರು ಕೋಟೆಯ ಗೊಡೆಗಳನ್ನಳಯುವುದಕ್ಕೆ ಬಂದಿರುತ್ತಾರೆ, ಎಂದು ಮಾವನವರು ನೋಡುವದಕ್ಕೆ ಬರುತ್ತಾರೆ. ಆಗ ಏನಾದರೂ ಉಪಾಯಮಾಡಿ ಅವರ ಜೊತೆಯಲ್ಲಿ ಹೊರಬಂ ಮನೆಯನ್ನು ಸೇರಿಕೊಳ್ಳಬೇಕು; ಇದೇ ಸರಿಯಾದ ಉಪಾಯ ಎಂದು ಕೈಲಿದ್ದ ಬೆತ್ತದಿಂದ ಕೋಟೆಯ ಗೋಡೆಯನ್ನು ಹೊಡೆದು ಶಬ್ದಮಾಡುತ್ತಾ, ಒಂದು ಎರಡು ಮೂರು ಎಂದು ಘಟ್ಟಿಯಾಗಿ ಹೇಳುತ್ತಿದ್ದನು.

ಭೀಮಣ್ಣನು ಇದನ್ನು ಕೇಳಿ ಜೊತೆಯಲ್ಲಿ ಬರುತ್ತಿದ್ದ ಗೌಡನೊಂದಿಗೆ "ಗೌಡ ಇದೇನು ಶಬ್ದ" ಎಂದನು.

ಗೌಡ— ಏಕೆ ಹೇಳುತ್ತೀರಿ, ಹೊಸಮನೆ ಬೋರೇಗೌಡನು ದೆವ್ವವಾಗಿ ಅರಿಚುತ್ತಾನೆ. ಮಾಯಾಗೌಡನ ಅಮ್ಮಕ್ಕನಿಗೆ ಭೀತಿಶಂಕೆಯಾಗಿ ಬದುಕಿದ್ದೇ ಹೆಚ್ಚಾಯಿತು.

ಭೀಮಣ್ಣ— ಇನ್ನೇನು ಗತಿಯಪ್ಪಾ, ಊರಿಗೆ ದೆವ್ವದ ಕಾಟ ಬೇರೆ ಬಂತೇ (ಎಂದು ಅಲಿಸಿ) ಎಲಾ ಗೌಡಾ, ಇದು ದೆವ್ವದ ಶಬ್ದವಲ್ಲ, ಒಂದು ಎರಡು ಎಂಬುದಾಗಿ ಗೋಡೆ ಅಳೆಯುವ ಶಬ್ದ: ಮೊಜ್ಜೀದಾರರು ಬಂದಿರಬೇಕು. ಊರಿಗೆ ಹುಡ್ಗೇದಾರರು ಬಂದಿರಕ್ಕೆ ಸಮಯದಲ್ಲಿ ನಾನು ಊರಿನಲ್ಲಿಲ್ಲದೇ ಹೋದೆನಲ್ಲಾ, ಇನ್ನಾವ ಪುಕಾರು ಒರತ್ತೆದೆಯೋ ಎಂದು ಗಾಬರಿಯಿಂದ ಕಂದಕವನ್ನಿಳಿದು, ಅಳಿಯನೆಂಬುದನ್ನು ಗುರ್ತಿಸಿ, ಗೌಡನನ್ನು ಕುರಿತು "ಎಲಾ ಗೌಡಾ ಅಳಿಯಂದರು ಬಂದಿದ್ದಾರೆ, ಪಡಸಾಲೆಯಲ್ಲಿ ರತ್ನಕಂಬಳಿಯನ್ನು ಹಾಸು, ದೀಪ ಮುಂತಾದ್ದನ್ನು ಸಿದ್ಧಪಡಿಸಿರೆಂದು ಮನೆಯಲ್ಲಿ ತಿಳಿಸು, ಎಂದು ಗೌಡನನ್ನು ಕಳುಹಿಸಿ, ನಿರ್ಮಾಣಮೂರ್ತಿಯ ಸನಿಹಕ್ಕೆ ಬಂದು "ಅಳಿಯಂದಿರೇ! ಮನೆಯಲ್ಲಿ ಶಂಕೂ ಸರಪಣಿ ಸಿದ್ಧವಾಗಿದೆ, ಕ್ಷಣಮಾತ್ರಕ್ಕೆ ಅಳಿಸಿ ಲೆಕ್ಕವನ್ನು ತಯಾರ್ಮಾಡಿಸುತ್ತೇನೆ, ತವರಿಗೇತಕ್ಕೆ ಶ್ರಮ, ಒಸ್ಸಿ ಮನೆಗೆ ಹೋಗೋಣ" ಎಂದರು ಭೀಮಣ್ಣನವರು.

ಮೂರ್ತಿ— ಮಾವನವರೇ! ಸರ್ಕಾರಿ ಕೆಲಸ, ತಟಿಕಟಕ್ಕೆ ಒಂದಿಷ್ಟೂ ಇಸ್ಸೂ ಅಳತೆಯಾಗಲ್ಲವೇ ಎಂದೆ. ರಿಮ್ಮೈಂಡರು ಮೇಲೆ ರಿಮ್ಮೈಂಡರು. ಬೆಳಕು ಹರಿಯುವದರಲ್ಲಿ ಲೆಕ್ಕ ಒಪ್ಪಿಸಬೇಕು, ಊಟಊಪಚಾರಗಳಾವುವೂ ಬೇಕಾಗಿಲ್ಲ ತಾವು ದಯಮಾಡಬಹುದು.

ಭೀಮಣ್ಣ— [ಈ ಖಂಡಿತೋಕ್ತಿಗಳನ್ನು ಕೇಳಿ] ಇದೇನಿದು, ಕಣ್ಣು ಕಾಣದ ಕಾವಳದಲ್ಲಿ ಬೆಳಕಿನ ಸಹಾಯವಿಲ್ಲದೆ ಲೆಕ್ಕವೆಂದರೇನು; ಇಲ್ಲಿನ ಹಾಗೆ ಅವಾಂತರದಲ್ಲಿ, ಈ ಅವೇಳೆಯಲ್ಲಿ, ಮನುಷ್ಯ ಒದುಕಿದ್ದುಂಟೆ. ಅದರ ಮೇಲಿನ ತಗಾದೆ ಎಷ್ಟರವಟ್ಟಿಗಿದೆಯೋ. ಮೊಜಣಿ ಕೆಲಸ ಹೊಸದಾಗಿ ಆಗಿರಬೇಕು, ಆದ್ದರಿಂದಲೇ ಇಸ್ಸು ಗಾಬರು; ಇದ್ದದ್ದರಲ್ಲಿ ಸಮಾಧಾನ ಮಾಡಿ ಕರೆದುಕೊಂಡು ಹೋಗುವುದು ಉತ್ತಮ ಎಂದುಕೊಂಡು. ಅಳಿಯಂದಿರೇ! ಈ ರಾತ್ರೆಯಲ್ಲೇ ಅಳತೆಯನ್ನು ಪೂರೈಸಿಕೊಡುತ್ತೇನೆ, ಈ ವಿಷಯದಲ್ಲಿ ಯೋಚಿಸಬೇಕಾದ್ದಿಲ್ಲ, ಮನೆಗೆ ಒಸ್ಸಿ.

ಮೂರ್ತಿ— ಮಾವನ ಸಹಾಯ ದೊರಕಿದಂತಾಯಿತು; ಆದರೆ ಮಾವನು ಹೇಗಿದ್ದಾನೋ ಪಾಪ, ಎಲ್ಲಿದ್ದಾನೋ ಎನ್ನುವದೇ ನನಗೆ ಕಾಣಬರಹಗಿಲ್ಲ. ಇವನ ಜೊತೆಯಲ್ಲಿ ನಡೆದು ನಾನು ಮನೆಯನ್ನು ಸೇರಿಕೊಳ್ಳಬೇಕು. ಸ್ವಲ್ಪ ಬಿಗಿಯಾಗಿದ್ದರೆ ಮಾವನೇ ಕೈಹಿಡಿದು ಕರೆದುಕೊಂಡುಹೋಗಿ ಮನೆಯನ್ನು ಸೇರಿಸುತ್ತಾನೆ; ಇದೇ ಸರಿಯಾದ ಉಪಾಯ, ಎಂದುಕೊಂಡು, ಮಾವನವರೇ! ತಲೆಕೆಡಿಸುವ ಕೆಲಸ, ಇದರಿಂದ ಮನಸ್ಸಿಗೆ ಯಾವುದೂ ಬೇಕಾಗಿಲ್ಲ; ತಾವು ದಯಮಾಡಿಸಿ.

ಭೀಮಣ್ಣ— ಒಳ್ಳೇ ಪ್ರಾಣಕ್ಕೆ ಬಂದಿತಲ್ಲಾ, ಈಗ ಜಿಬ್ಬರಿ ಅಪಾಯವಾಗುವುದೇನೋ ನಿಜ. ಆದ್ದರಿಂದ ಒಲವಂತವಾಗಿ ಕೈಹಿಡಿದು ಕರೆದುಕೊಂಡು ಹೋಗಲೇಬೇಕು. ಈ ಭ್ರಾಂತಿಯು ತಪ್ಪತಕ್ಕದ್ದಲ್ಲ, ಎಂದಂದುಕೊಂಡು, ಭೀಮಣ್ಣನು ಮೂರ್ತಿಯ ಕೈ ಹಿಡಿದುಕೊಂಡು ಹೊರಡಲುದ್ಯುಕ್ತನಾದನು.

(ಮುಂದುವರಿಯುವುದು.)

ಟ್ರಕ್‌ದ್ವೀಪದ ಮಹತ್ವ.

ಗ್ವಾಡಲ್‌ಕೆನಲ್‌ನಿಂದ ಟೋಕಿಯೋಗೆ ಒಂದು ನೇರವಾದ ಗೆರೆ ಎಳೆದುನೋಡಿ ಈ ನಡುವೆ ಒಂದು ಸಣ್ಣ ದ್ವೀಪವಿದೆ. ಇದರ ಹೆಸರು ಟ್ರಕ್, ಇದು ಟೋಕಿಯೋನಿಂದ 1300 ಮೈಲಿ ದೂರದಲ್ಲಿ ಅಂದರೆ ಸಾಲೋಮನ್ಸ್‌ನಿಂದ 1300 ಮೈಲಿ ದೂರದಲ್ಲಿದೆ. ಈ ದ್ವೀಪದಲ್ಲಿ ಬಹಳ ವರ್ಷದಿದ ಯಾವ ಬಿಳೀ ಮನುಷ್ಯನನ್ನೂ ಕಾಣಿಸಲು ಬಿಡಲಿಲ್ಲ. ಈ ದ್ವೀಪದ ವಿಷಯದಲ್ಲಿ ಜಪಾನಿಯರು ತಮ್ಮ ಶಕ್ತಿಯನ್ನು ಹೆಚ್ಚಾಗಿ ತೋರಿಸಿರುವರು ಪೆರಲ್‌ಹಾರ್ಬರ್‌ಗೆ ಸಮನಾದಂಥಾ ಒಂದ ಬಂದರನ್ನು ಕಟ್ಟಿರುತ್ತಾರೆ. ಅಮೇರಿಕಾದ ಪೆರಲ್‌ಹಾರ್ಬರ್‌ನ್ನು ಯಾರಾದರೂ ನೋಡಬಹುದು. ಈ ಟ್ರಕ್‌ದ್ವೀಪದ ವಿಷಯ ಯಾರಿಗೂ ತಿಳಿಯದು. ಬಹಳ ರಹಸ್ಯವಾಗಿ ಜಪಾನಿಯರು ಈ ದ್ವೀಪದಲ್ಲಿ ಒಂದನ್ನು ನಿರ್ಮಾಣಮಾಡಿದರು. ಸಾವಿರಾರು ಮೈಲಿ ದೂರದಿಂದ ಅಂದರೆ ಟೋಕಿಯೋದಿಂದ ಸಾಲು ಸಾಲಾಗಿ ಹಡಗುಗಳಲ್ಲಿ ಗುಂಡು ಮುಂತಾದ ಸಾಮಾನುಗಳನ್ನ ತಂದರು. ಇದು ಹಿಂದೆ ಜರ್ಮನಿಗೆ ಸೇರಿದ್ದು, 1914 ನೇ ಯುದ್ಧದಲ್ಲಿ ಇವರ ಪಾಲಿಗೆ ಬಂತು ಇಲ್ಲಿ ಕೋಟೆ, ಕೊತ್ತಲುಗಳನ್ನು ಕಟ್ಟಬಾರದೆಂದು ಒಪ್ಪಂದವಿದ್ದರೂ ಇದನ್ನು ಗಮನಿಸಲಿಲ್ಲ ಈಗ ತಿಳಿದು ತಮ್ಮ ಎಲ್ಲಾ ನೌಕೆಗಳನ್ನು ಒಟ್ಟುಗೂಡಿಸಿ ನಿರ್ಮಾಣಮಾಡುವಷ್ಟು ಅನುಕೂಲಮಾಡಿರುತ್ತಾರೆ. ಹಡಗುಗಳು ತಂಗಲು ಭಾರಿ ನಿರ್ಮಾಣಗಳಿವೆ. ದೊಡ್ಡ ದೊಡ್ಡ ವಿಮಾನಗಳ ನಿರ್ಮಾಣಗಳಿವೆ, ಅಲ್ಲಿ 14 ಇಂಚು 16 ಇಂಚು ಗುಂಡುಗಳನ್ನು ಸಿಟ್ಟಿರುತ್ತಾರೆ ಇವುಗಳಿಂದ ಹೆಲ್ಲುಗಳನ್ನು 25 ಮೈಲಿ ದೂರ ಕಾರಬಹುದು. ಒಂದು ಸಬ್‌ಮೆರಿರ್ನ್ ನಿರ್ಮಾಣವಲ್ಲದೆ ಹಡಗುಗಳ ರಿಪೇರಿಮಾಡುವ ಎರಡು ಭಾರಿ ಡಾಕ್‌ಗಳಿವೆ. ಈ ಕಾಲದಲ್ಲಿ ಬ್ರಿಟಿಷರು ದಿಂದ ವಿಮಾನಧಾಳಿ ನಡೆಸುವುದ ಕಷ್ಟ.

ಲೇಡಿ ಕರ್ಜನ್ನರ ಮನೋವ್ಯಾಧಿ

1898 ರಿಂದ 1905 ರವರೆಗೆ ಹಿಂದೂ ದೇಶದ ಗೌರ್ನರ್ ಜನರಲ್ಲಾಗಿದ್ದ ಬಂಗಾಳ ರಾಷ್ಟ್ರವನ್ನು ವಿಭಜನೆ ಮಾಡಿ ವಂದೇಮಾತರಂ ಉದ್ಯಮಕ್ಕೆ ಕಾರಣರಾದ ಕರ್ಜನ್ ರವರು ಬಹಳ ಬುದ್ಧಿವಂತರು, ನಿರಂಕುಶರು. ಇವರ ಪತಿಯವರೋ ಬಹಳ ದಯಾಹೃದಯಳು. ಆಕೆಯು ದಾನಧರ್ಮಗಳನ್ನು ಮಾಡಿ ಪ್ರಜೆಗಳ ಅನುರಾಗಕ್ಕೆ ಪಾತ್ರಳಾಗಳು, ಆಕೆಗೆ ಅಪ್ರಶ್ವಸವಾದಾಗ ಅನೇಕ ದೇಪಾಲಯಗಳಲ್ಲಿಯೂ ಮಸೀದಿಗಳಲ್ಲಿಯೂ ಆಕೆಗೆ ಆರೋಗ್ಯವಾಗಲೆಂದು ಪ್ರಾರ್ಥನೆಗಳು ನಡೆದವು.

ತನ್ನ ಪತಿಯು ಅನೇಕಾನೇಕ ರಾಜರ ಮನಸ್ಸುಗಳಿಗೆ ಬಾಧೆಯನ್ನು ಬಿಟ್ಟು ಮಾಡುತ್ತಾ ಅತಿ ವೈಭವದೊಡನೆ ಡೆಲ್ಲಿ ದರ್ಬಾರನ್ನು ನಡೆಸುತ್ತಿದ್ದುದಕ್ಕೆ ಆಕೆಯು ಬಾಧೆಪಡುತ್ತಾ, ಅದು ನಡೆಯುತ್ತಿದ್ದ ಕಾಲವೆಲ್ಲಾ ಪ್ರತಿ ರಾತ್ರಿಯೂ ಬಹಳ ದುಃಖಪಡುತ್ತಿದ್ದಳಂತೆ. ತನ್ನ ಪತಿಯು ಪ್ರಜೆಗಳ ಅನುರಾಗಕ್ಕೆ ಪಾತ್ರನಾಗದಿರುವಿಕೆಯು ಕೂಡ ಆಕೆಯ ಮನೋವ್ಯಥೆಗೆ ಕಾರಣವಾಗಿತ್ತಂತೆ ಈ ಮನೋವ್ಯಥೆಯೇ ಆಕೆಯ ಅಕಾಲ ಮರಣಕ್ಕೆ ಕಾರಣವಾಯಿತಂತೆ,— ಹೀಗೆಂದು ಜಾಕ್ ಲಾಂಡನ್ ಎಂಬುವನು 1908 ರಲ್ಲಿ ಬರೆದಿರುವನು.

(ಟಿಂ)

ಸಿಂಗಪೂರಿನಲ್ಲಿ ಕೋಟ್ಯಾನುಕೋಟಿ ದ್ರವ್ಯ ಸುರಿದು ಕಟ್ಟಿದ ರೇವು ಪ್ರಪಂಚಕ್ಕೆ ತಿಳಿಯಿತು. ಟ್ರಕ್‌ನಲ್ಲಿ ಜಪಾನಿಯರು ಕಟ್ಟಿದ್ದು ಇದುವರಿಗೂ ಯಾರಿಗೂ ತಿಳಿಯದು. ಈಗ ವಿಕ್ಟರಿ ಕೇಂದ್ರಸ್ಥಳ ಗ್ವಾಡಲ್‌ಕೆನಾಲ್. ಇದು ಸಾಲಮನ್ ದ್ವೀಪದಿಂದ 1300 ಮೈಲಿ ದೂರದಲ್ಲಿದೆ ಇಷ್ಟು ದೂರ

ರಷ್ಯಾ

22-6-43 ಕ್ಕೆ ಜರ್ಮನಿಯು ರಷ್ಯಾ ಸಂಗಡ ಯುದ್ಧ ಹೂಡಿ ಎರಡು ವರ್ಷ ತುಂಬಿ ಮೂರನೇ ವರ್ಷ ಪ್ರಾರಂಭವಾಯಿತು. ಹಿಟ್ಲರು ಮಾಡಿದ್ದ ಶಪಥ ನಡೆಯಲಿಲ್ಲ. ತನ್ನ ಪೂರ್ವ ನೆರೆಹೊರೆಯವರ ಸಂಗಡ ದ್ವೇಷ ಕಟ್ಟಲು ಕ್ರೈಸ್ಟ್ ದಿ ಗ್ರೇಟ್ ಆದಿಯಾಗಿ ಜರ್ಮಾರ್ಕಾರವರೆಗೆ ಯಾರೂ ಅನೇಕ್ಷಿಸಲಿಲ್ಲ ಹಿಂದಿನ ಯುದ್ಧದಿಂದ ಇದು ನನಗೆ ಮುಂದಟ್ಟಾಗುವದು.

1918 ರಲ್ಲಿ ರಷ್ಯಾವು ವಿಜಯಸಡೆಯದಿದ್ದುದು ಅದರ ತಪ್ಪಲ್ಲ. ರಷ್ಯಾವು ಎಚ್ಚೆತ್ತುಕೊಳ್ಳುವುದಕ್ಕೆ ಮುಂಚೆಯೇ ರಷ್ಯಾವನ್ನು ಗೆಲ್ಲುವುದಾಗಿ ತಪ್ಪು ತಿಳಿವಿನಿಂದ ಮಿತ್ರರ ಕಡೆ ಇರುವ ಅನೇಕ ಮಿಲಿಟರಿ ಜ್ಞಾನಿಗಳೂ ಇದೇ ಅಭಿಪ್ರಾಯ ಪಟ್ಟಿದ್ದರು. ಇದು ರಷ್ಯನರಿಗೂ ಗೊತ್ತು.

1942 ರಲ್ಲಿ ಮಿ॥ ಸ್ಟಾಲಿನ್ನರು ಯುದ್ಧ ಕೊಸೆಗಾಣಿಸಬೇಕಾದರೆ ಸೈನ್ಯದ ಸತ್ವವಿರಬೇಕು, ಸೇನೆಯವರು ಎದೆಗೆಡಬಾರದು, ದಂಡನಾಯಕನಿಗೆ ಹೆಚ್ಚಾಗಿ ಸೇನೆಯನ್ನು ಕೊಡಬೇಕು ಅದು ಚೆನ್ನಾಗಿ ತರಬೇತಾದ ಸೇನೆಯಾಗಿರಬೇಕು, ಎಂದು ಹೇಳಿದ್ದನು.

ಹಿಟ್ಲರಿಗೆ ಈಗ ರಷ್ಯಾ ಸೇನೆ ಪ್ರಬಲತ್ವ ತಿಳಿಯಿತು ಬಾಯಿಬಾಯಿ ಬಡುತ್ತಿರುವನು. ಈಗ ರಷ್ಯನರು ಜರ್ಮನರನ್ನು ಮುಂದೆ ಬಿಡದೆ ತಡೆದಿರುವರಲ್ಲದೆ ಜರ್ಮನ್ ಸೇನೆಯ ಒಹು ಭಾಗವನ್ನು ಹೊರಗೆ ಹೋಗದಂತೆ ಸುತ್ತಿಕೊಂಡಿರುವರು. ದೊಡ್ಡ ಕದನವನ್ನು ಹಂಡಲು ತಪ್ಪುನ್ನರು ಕಾಯುತ್ತಿದ್ದಾರೆ. ಈ ಎರಡು ವರ್ಷಗಳಲ್ಲಿ ಜರ್ಮನರ 60 ಲಕ್ಷ ಸೇನೆ ಹತವಾಯಿತು. ಅಯುಧ ಸಾಮಾನು ಮಿತಿಮೀರಿದಷ್ಟು ನಾಶವಾಯಿತು, ರಷ್ಯನರೂ ನಷ್ಟಪಟ್ಟಿದ್ದಾರೆ, ಆದರೆ ಅವರಿಗೆ ಲಾಭ ಹೆಚ್ಚು. ಹಿಟ್ಲರನು ಹಿಂದೆ ಸ್ಟಾಲಿನ್ ಗ್ರಾಡ್ ಮತ್ತು ಕಾಕಸಸ್ಸನ್ನು ಹಿಡಿದಿದ್ದರ ಮಿತ್ರರಿಗೆ ತುಂಬಾ ನಷ್ಟವಾಗುತ್ತಿತ್ತು. ತುರ್ಕಿಯು ನುಮ್ಮನಿರಲು ಆಗುತ್ತಿರಲಿಲ್ಲ. ಹಿಟ್ಲರನು ಅಲ್ಲೆಲ್ಲಾ ಸುತ್ತಾಡಿ ಚಳಿಚಾರಕ್ಕೆ ಬರುವ ತುಕ್ಕಿಗೆ ಅತ್ಯಂ ರಷ್ಯವು ಈ ತೊಂದರೆಯನ್ನೆಲ್ಲಾ ಕಪ್ಪಿಸಿದರು. ಮಿತ್ರರಿಗೆ ಒಂದು ಬಗೆಯಲ್ಲಿ ಜಯವಾಯಿತೆಂದು ಹೇಳಬಹುದು.

ಇದರಿಂದ ಮಿತ್ರರು ಹೆಚ್ಚು ಹೆಚ್ಚಾಗಿ ಯುದ್ಧೋದ್ಯಮವನ್ನು ಮಾಡಿಕೊಳ್ಳಲು ಸಮಯ ಸಿಕ್ಕಿತು ಶತ್ರುವನ್ನು ನಿರ್ಮೂಲಮಾಡಲು ಅನುಕೂಲವಾಯಿತು. ಇನ್ನು ಶತ್ರುಗಳ ವಾಸ ಬಹಳ ಕಾಲವಿಲ್ಲ ಮಿತ್ರರು ಯೂರೋಪಿನಲ್ಲಿ ಎರಡನೇ ರಣರಂಗವನ್ನು ಬೇಗನೆ ಸ್ಥಾಪಿಸಬೇಕು. ಇದರಿಂದ ತಾವು ತನ್ನನ್ನು ಇದುವರೆಗೆ ಕಾಪಾಡಿದ ರಷ್ಯನರಿಗೆ ಕೃತಜ್ಞತೆಯನ್ನು ತೋರಿದಂತಾಗುವುದಿಲ್ಲವೆ? ರಷ್ಯರು ಪಶ್ಚಿಮ ಯೂರೋಪಿನಲ್ಲಿ ಎರಡನೇ ರಣರಂಗವನ್ನು ಹೂಡಿ, ತಮಗೆ ಸ್ವಲ್ಪ ವಿಶ್ರಾಂತಿ ಕೊಟ್ಟಂತಾಗುವುದೆಂದು ಪದೇಪದೇ ಕೇಳುತ್ತಿರುವರು. ಮಿತ್ರರು ವಿಮಾನಧಾಳಿಯನ್ನು ವಿಶೇಷವಾಗಿ ಮಾಡುತ್ತಿರುವರು. ದೊಡ್ಡ ರಣರಂಗವನ್ನು ಹೂಡಿ ಎಂದು ರಷ್ಯನ್ನ ಬೇಡಿಕೆ ! ಚಿಕ್ಕ ಕದನಗಳಿಂದ ಪ್ರಯೋಜನವಿಲ್ಲವೆನ್ನುವರು.

ರಷ್ಯನರೂ ಮಿತ್ರರೂ ಒಟ್ಟಗೂಡಿ ಯುದ್ಧವನ್ನು ಹೂಡಲಾಗುವುದಿಲ್ಲ ಪಶ್ಚಿಮ ಯೂರೋಪಿನಲ್ಲಿ ಬಲವಾದ ಹೆಚ್ಚು ಸೇನೆಯಿಂದ ಮಿತ್ರರು ಎಂದು ಕುರುಕ್ಷೇತ್ರವನ್ನು ಮಾಡುವರೋ ನಾವು ಹೇಳುವಹಾಗಿಲ್ಲ. ರಷ್ಯಾವನ್ನು ಈ ಬೇಸಿಗೆಯಲ್ಲಾದರೂ ಯುದ್ಧಮಾಡಿ ಎನ್ನುವುದೂ ಸರಿಯಾದ್ದಲ್ಲ !

ತುರ್ಕಿಯು ಇಸ್ಮಿಯಾಲಗೆ 60 ಮೈಲಿ ಪೂರ್ವದಲ್ಲಿರುವ ಅಡಿಜಾರ್ ನಗರದಲ್ಲಿ ಭೂಕಂಪವಾಗಿ 15 ಸಾವಿರ ಜನ ಸತ್ತರೆಂದೂ ಅಲ್ಲಿ ವಾಸವಾಗಿದ್ದವರು 24 ಸಾವಿರ ಮೆಂದೂ ಹೇಳಲಾಗಿದೆ.

ನಿನ್ನೇ ದಿವಸ ಬ್ರಿಟನ್ನಿಂದ 700 ಕ್ಕೆ ಮೀರಿದಷ್ಟು ವಿಮಾನಗಳು ಹೊರಟು ಜರ್ಮನಿಯ ಅಗ್ನೇಯದ ಕಡೆಗಳಲ್ಲಿ ಧಾಳಿ ಮಾಡಿದವು. ಮಿತ್ರರ 44 ವಿಮಾನಗಳು ಮಾತ್ರ ಹಿಂತಿರುಗಲಿಲ್ಲ.

ಪುರ್ತಾಲಾ ಸರಕಾರದವರು ತಮ್ಮ ಪ್ರಜೆಗಳು ದನಸಗಳನ್ನು ಕೊಳ್ಳಲು 3 ತಿಂಗಳು ಸಂಬಳವನ್ನು ಮುಂಗಡವಾಗಿ ಕೊಟ್ಟಿರುತ್ತಾರೆ.



ಉಲಾಜಾಕಿನ ಬಂದು ದೃಶ್ಯ.

ಸತ್ಯವಾದಿ ಪತ್ರಿಕೆಗೆ ಚಂದಾದಾರರಾಗಿರಿ

ಮೈಸೂರು ವೈದ್ಯ ಪತ್ರಿಕೆ

ಉತ್ತಮ ಸಚಿತ್ರ ಕನ್ನಡ ತೆಲಗು

ಮಾಸಪತ್ರಿಕೆ

ಚಂದಾದಾರರಾಗಿರಿ

ಈಗ ವಾರ್ಷಿಕ ಚಂದಾ ರೂ. 3-0-0

ಒಂದು ಪ್ರತಿ 4 ಆಣೆ.

ಹಿಂದಿನ ಪತ್ರಿಕೆಯ ಬೆಲ್ಲಾ ಒಕ್ಕಾಲ್ ನಲ್ಲಿಯೂ ಪತ್ರಿಕೆಯು ತೆಯಾರಿ.

ಕಾರ್ಯಾಲಯ :

ಶೇಷಾಸದಾಂಭವನ

ಅಶೋಕ ರಸ್ತೆ — ಮೈಸೂರು

Coming shortly at OPERA

ಉಲ್ ಜಾಕ್

ತಾರಾಗಣ —

ಸರ್ದಾರ್ ಅಖ್ತಾರ್

ಮಜರ್ ಖಾನ್

ಕೃಷ್ಣಾಕಾಂತ

ಅರ

ಸಾಮಾಜಿಕ

ಭಾವಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ ಪೋಸ್ಟೇಜು 1 ಆಣೆ. ಮಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ಲೀಗ್ ಆಫ್ ನೇಷನ್ಸ್ ಯೂನಿಯನ್ನಿಗೆ ಮಿ॥ ಚರ್ಚಿಲ್ಲರು ಪುನಃ ಗೌರವ ಅಧ್ಯಕ್ಷರಾಗಿ ಆಯಲ್ಪಟ್ಟಿದ್ದಾರೆ

o o

ನಾಗಪುರದ ವಿಶ್ವವಿದ್ಯಾಲಯದ 22 ನೇ ವಾರ್ಷಿಕ ಪದವೀದಾನ ಸಮಾರಂಭವು ಈ ತಿಂಗಳು 21 ರಲ್ಲಿ ನಡೆಯುವುದು. ಮುಖ್ಯ ಪಾಠಂತರ ಗೌರವರು ಅಧ್ಯಕ್ಷತೆಯನ್ನು ವಹಿಸುವರು. ಸರ್ ವಿಜಿ ಇ

o o

ಮಿಲ್ಕ್‌ಮಂಡಲಿಯವರು ದಕ್ಷಿಣ ಜರ್ಮನಿ ವೀಲೆ ಭರ್ರಾ ವಿಮಾನಧಾಳಿ ನಡೆಸಿದರು.

o o

ಲಿಂಕ್‌ಗಾಡಿನಮೇಲೆ ನಾಜಿಗಳ ವಿಮಾನಧಾಳಿ ನಡೆಸಲು ಸ್ಪರ್ಧಿಸಿದರು ಫಲವಾಯಿತು.

o o

ಸಿಂಧಿನಲ್ಲಿ ಮಿಡತೆಗಳನೇಲೆ ಯುದ್ಧ ಹೂಡಿರುವರಂತೆ. ಇಲಿಗಳಮೇಲೂ ಅಂತ್ಯ ಹಗಡಲಾಗುವುದಂತೆ.

• ಸೆಗೆ ಸೇರಿಸಿ

ವಿವಿಧ ವಿಷಯ

ಮುಂದೆ ಪೈಸರಾಯ್ ರಾಗುವ ಫೀಲ್ಡ್ ಮಾರ್ಷಲ್ ವೇವಲರು ಇಂಡಿಯಾಆಫೀಸಿನಲ್ಲಿ ಕೆಲಸ ಮಾಡುತ್ತಿರುವರು.

ಂ ಂ

ನೇಪಲ್ಸ್ ಮತ್ತು ಸಿಸಲಿಯ ಅನೇಕ ಊರುಗಳನ್ನು ಜುಲೈ 10 ರೊಳಗಾಗಿ ಇಟಲಿಯವರು ಖಾಲಿಮಾಡಬೇಕೆಂದು ಸರ್ಕಾರಿ ಆಜ್ಞೆಯಾಗಿದೆಯೆಂದು, ತುರ್ಕಿಯಿಂದ ತುತೀವಾರ್ತೆ ಬಂದಿದೆ.

ಂ ಂ

ಜನವರಿ 15 ರಲ್ಲಿ ಡಂಡಂ ರೈಲ್ವೇ ಸ್ಟೇಷನ್ನಿನಲ್ಲಿ ನಡೆದ ರೈಲ್ವೆ ಅನಾಹುತಕ್ಕೆ ಡ್ರೈವರೇ ಹೊಣೆಗಾರನೆಂದು 6 ತಿಂಗಳ ಕಠಿಣ ಸಜೆ ವಿಧಿಸಲಾಗಿದೆ.

ಂ ಂ

ಈಗ ಯೂರೋಪಿನ ಮೇಲೆ ದಂಡೆಯಾತ್ರೆ ಹೋಗುವ 'ಇಕ್ವೇಷ್ಟ್ರಿಯನ್ ಸೇನೆ' ಯವರು ನೀರಿನ ಮೇಲೂ, ಭೂಮಿಯ ಮೇಲೂ ಯುದ್ಧಮಾಡುವ ರೀತಿಯಲ್ಲಿ ಅಮೆರಿಕನ್ನರು ತಮ್ಮ ಸೇನೆಗಳನ್ನು ತರಬೇತು ಮಾಡುತ್ತಿರುವರು.

ಂ ಂ

ಜರ್ಮನಿಯ ಸೇನೆಯಲ್ಲಿ ಜನರು ಕಮ್ಮಿಯಾಗುತ್ತಿರುವುದರಿಂದ ಆರ್ಯರಲ್ಲದ ಪೋಲ್ಸ್ ಕ್ರೋಟ್ಸ್ ಮುಂತಾದವನ್ನು ಹಿಟ್ಲರು ಸೇನೆಗೆ ಸೇರಿಸಿಕೊಳ್ಳುತ್ತಿರುವನು.

ಂ ಂ

ಈಗಿನ ಯುದ್ಧದಿಂದ ಅಮೇರಿಕಾ ಸೇನೆಯಲ್ಲಿ ನಷ್ಟ 8450 ಜಂದೂ ಇವರ ಹತ್ತಿರ ಸಂಬಂಧಸ್ಥರಿಗೆಲ್ಲಾ ಈ ವಿಷಯ ತಿಳಿಸಲಾಗಿದೆಯೆಂದೂ ಪ್ರಕಟವಾಗಿದೆ. ಇದರಲ್ಲಿ ಸತ್ತವರು 13 ಸಾವಿರ ಗಾಯಗೊಂಡವರು 21 ಸಾವಿರ, ಪತ್ತೆ ಇಲ್ಲದವರು 32 ಸಾವಿರ, ಯುದ್ಧ ಖೈದಿಯಾಗಿರುವವರು 20 ಸಾವಿರ.

ಂ ಂ

ಮಿಡತೆಗಳ ಸಂಗಡ 5 ವರ್ಷ ಕಾಲ ಯುದ್ಧ ಹೂಡಿ ಅವನ್ನು ನಿರ್ಮೂಲ ಮಾಡಲು ಕರಾಚಿ ಸರಕಾರದವರು 7ವರೆ ಲಕ್ಷ ರೂಪಾಯಿ ಮಂಜೂರ್ಮಾಡಿರುವರು. ಭಾರತದಲ್ಲಿ ಮಿಡತೆ ಯುದ್ಧಕ್ಕೆ ದ್ರವ್ಯ ಖರ್ಚು ಮಾಡುವುದು ಇದೇ ಮೊದಲು.

ಂ ಂ

ಸಿಂಧಿನಲ್ಲಿ ಮಿ || ಜಿನ್ನಾರವರು ಒಂದು ಮುಸ್ಲಿಂ ಕಾಲೇಜಿನ ಶಂಕುಸ್ಥಾಪನೆ ಮಾಡಿದರು, ಇದಕ್ಕೆ ಅವರು 5 ಸಾವಿರ ರೂಪಾಯಿ ದಾನ ಮಾಡಿದರು, ಇತರ 62 ಸಾವಿರ ರೂ. ಗಳನ್ನು ಕೊಡಲು ಏರ್ಪಾಡಿರುವರು.

ಬೆಲ್ಜಿಯಮ್ಮಿನ ಕೂಲಿಗಾರರಲ್ಲಿ ಕಾರ್ಖಾನೆಗಳನ್ನು ಬಿಟ್ಟುಕೊಡಬೇಕೆಂದು ಬ್ರಿಟಿಷರು ಎಚ್ಚರಿಕೆ ಕೊಟ್ಟಿರುವರು. ಆ ಕಾರ್ಖಾನೆಗಳನ್ನೇಲೆ ಭಾರಿ ಧಾಳಿ ಮಾಡುವರಂತೆ, ಇದೇ ತರಹ ಎಚ್ಚರಿಕೆಯನ್ನು ಫ್ರಾನ್ಸಿನವರಿಗೂ ಇಟಲಿಯವರಿಗೂ ಕೊಟ್ಟಿದ್ದರೂ ಅವರು ಕೇಳಲಿಲ್ಲ, ನಷ್ಟಪಟ್ಟರು,

ಂ ಂ

ಕಳೆದ ಭಾನುವಾರ ಸರ್ ಎಂ. ವಿಶ್ವೇಶ್ವರಯ್ಯನವರ ಬೊಂಬಾಯಿನಲ್ಲಿ ಮಾತನಾಡುತ್ತಾ, ಯುದ್ಧ ಮುಗಿದ ನಂತರ ಭಾರತದಲ್ಲಿ 5 ವರ್ಷ ಕಾಲದಲ್ಲಿ ಎಲ್ಲಾ ಕೈಗಾರಿಕೆಗಳನ್ನೂ ಸ್ಥಾಪಿಸಲು ಒಂದು ಸಾವಿರ ಕೋಟಿ ರೂಪಾಲಧನವು ಬೇಕಾಗುವುದೆಂದು ಹೇಳಿದರು.

ಂ ಂ

ಅಮೇರಿಕಾದ ಡೆಮ್ಯಾಕ್ರಟ್ಟಿನಲ್ಲಿ ಜಾತಿ ಸಂಬಂಧದ ಗಲಭೆಯಾಗಿ ನೀಗ್ರೋ ಜೀವೀಜನರಿಗೆ ಹೊಡೆದಾಟ ನಡೆದು 23 ಮಂದಿ ಸತ್ತರು ಮತ್ತು 700 ಮಂದಿ ಗಾಯಗೊಂಡರು. ಅಲ್ಲಿ ಈಗ ಮಾರ್ಷಲ್ ಲಾ ಜಾರಿಯಲ್ಲಿದೆ 1300 ಮಂದಿ ದಸ್ತಗಿರಿ ಮಾಡಲಟ್ಟಿದ್ದಾರೆ,

ಂ ಂ

ಬರ್ಮಾ ಯುದ್ಧವು ಮುಳ್ಳಿಯು ಮುಗಿಯುವನರಿಗೂ ಏನೂ ಮಾಡಲಾಗುವುದಿಲ್ಲ. ಅರಕಾನ್ನಿನಲ್ಲಿ ಮಿತ್ರರಿಗೆ ಆದುದು ಅಪಜಯವೆಂದು ಹೇಳಲಾಗುವುದಿಲ್ಲ. ಅರಕಾನ್ ಮುಖಾಂತರ ಬರ್ಮಾ ಮೇಲೆ ಸುಗ್ಗಲು ಆಗುವುದಿಲ್ಲ. ಅಲ್ಲಿ ಬೆಟ್ಟ ಗುಡ್ಡ ಕಾಡು ಕೊಚ್ಚೆ ಇವುಗಳಿಂದ ತುಂಬಿಹೋಗಿದೆ. ಬರ್ಮಾಕ್ಕೆ ರಂಗೂನ್ ಮುಖ್ಯ. ಆದ್ದರಿಂದ ಸಮುದ್ರದಿಂದಲೇ ಶತ್ರುವನ್ನು ನಾಶಮಾಡಬೇಕು. ಆಸ್ಸಾಂನಿಂದ ಬರ್ಮಾ ಮೇಲೆ ಸುಗ್ಗಲು ಸೇತುವೆ ರಸ್ತೆ ಇವುಗಳನ್ನು ತಯಾರ್ಮಾಡಬೇಕಾಗಿದೆ.

ಂ ಂ

ಜಿಬ್ರಾಲ್ಟರಿನಿಂದ ಮತ್ತೆ ಅನೇಕ ನೌಕೆಗಳು ಉತ್ತರ ಆಫ್ರಿಕಾಕ್ಕೆ ಹೊರಟವೆಂದೂ ಅವೆಲ್ಲಾ ಆಲ್ಜೀರಿಯಾ ಕೊಲ್ಲಿಯಲ್ಲಿ ತಂಗಿರುವವೆಂದೂ ಜರ್ಮನರು ಹೇಳುತ್ತಿರುವರು,

ಂ ಂ

ಜರ್ಮನರು ರಷ್ಯಾದವರ ಮೇಲೆ ಯುದ್ಧಹೂಡಿ ಮೊನ್ನೆ ಸೋಮವಾರಕ್ಕೆ ಎರಡು ವರ್ಷ ತುಂಬಿ ಮೂರನೇ ವರ್ಷ ನಡೆಯುತ್ತಿದೆ. ಈ ಎರಡು ವರ್ಷಗಳಲ್ಲಿ ಜರ್ಮನರಿಗೆ 64 ಲಕ್ಷ ಸೇನೆ ನಷ್ಟವಾಗಿದೆಯೆಂದೂ ರಷ್ಯಾದವರಿಗೆ 42 ಲಕ್ಷ ಮಾತ್ರವೆಂದೂ ಹೇಳಲಾಗಿದೆ.

ವೆಲೂಕೀ ಸಮೀಪದಲ್ಲಿ ರಷ್ಯಾ ಜರ್ಮನರಿಗೆ ಘೋರವಾದ ಯುದ್ಧವು ನಡೆಯುತ್ತಿರುವುದು.

ಂ ಂ

ಈಗಿನ ಏರ್ಪಾಡಿನಂತೆ ಜನರಲ್ ಜೀ ರೋರವರು ಉತ್ತರ ಮತ್ತು ಪಶ್ಚಿಮ ಆಫ್ರಿಕಾ ಪಡಳಿತವನ್ನು ನೋಡಿಕೊಳ್ಳುವರೆಂದೂ, ಇತರ ಫ್ರೆಂಚ್ ಸ್ವಾತಂತ್ರ್ಯದ ಪಡಳಿತವನ್ನು ಜನರಲ್ ಡಿಗಾಲರು ನೋಡಿಕೊಳ್ಳುವರೆಂದೂ ನಿರ್ಧಾರವಾಗಿದೆ

ಂ ಂ

ಆಸ್ಟ್ರೇಲಿಯಾ ಸರ್ಕಾರದಲ್ಲಿ ಈಗಿರುವ ಮಂತ್ರಿ ಮಿ || ಕರ್ಟಿನ್ನರಲ್ಲಿ ಅವಿಶ್ವಾಸವನ್ನು ಸೂಚಿಸುವ ಠರಾವನ್ನು ಎದುರು ಪಾರ್ಟಿಯವರು ತಂದು ಒಂದು ವೋಟಿನಿಂದ ಪರಾಜಿತರಾದರು.

ಂ ಂ

ಚೀನಾದಲ್ಲಿ ಯಾಂಗಟೀಸ್ ನದಿಯ ತೀರದಲ್ಲಿ ಈಗ ಜಪಾನಿಯರ ಕೈಯಲ್ಲಿರುವ ಪಿಷಾ ನಗರವನ್ನು ಚೀನೀಯರು ಮುತ್ತಿರುವರು

ಂ ಂ

ಕೈರೋದಲ್ಲಿನ ಭೌತಿಕ ಶಾಸ್ತ್ರಜ್ಞರು ಪೂರ್ವ ಸಹಾರಾ ವರಳ್ಗಾಡಿನಲ್ಲಿ ಬಂಗಾಳ ಮತ್ತು ಕ್ರೋಮುಂಗಳು ಅಪಾರವಾಗಿ ದೊರೆಯುವ ಗಣಿಗಳಿರುವಿಕೆಯನ್ನು ತಮ್ಮ ಪರಿಶೋಧನೆಗಳಿಂದ ಕಂಡು ಹಿಡಿದಿರುವರು. ಪ್ರಪಂಚದಲ್ಲಿ ಲಭಿಸುವ ಕ್ರೋಮಿನಲ್ಲಿ ಶೇಕಡಾ 57 ರಷ್ಟು ಅಲ್ಲಿ ಲಭಿಸುವದಂತೆ.

ಂ ಂ

ಅಮೇರಿಕಾದಲ್ಲಿ ಮಿಲಿಟರಿಯವರ ವಯಸ್ಸನ್ನು 65 ಕ್ಕೆ ಏರಿಸುವುದಾಗಿ ಮಿ || ರೂಸ್‌ವೆಲ್ಟರು ಹೇಳಿರುವರು.

ಂ ಂ

ಐರ್ಲಂಡಿನಲ್ಲಿ ಚುನಾವಣೆ ನಡೆಯುತ್ತಿರುವುದು. ಈಗಾದ ಓಟಿನ ಎಣಿಕೆಯಲ್ಲಿ ಎಂ ಡಿವಿಲೆರನವರಿಗೆ ಹೆಚ್ಚು ವೋಟು ಒಂದಿದೆ ಇನ್ನೂ ಎಣಿಕೆ ನಡೆಯುತ್ತಲೇ ಇದೆ.

ಂ ಂ

ಈಗ 3 ದಿವಸದ ಕೆಳಗೆ ಮಿತ್ರರು ಇಟಲಿಯಲ್ಲಿರುವ ಸಲೋಸಾ ಮೇಲೆ ಧಾಳಿ ಮಾಡಿದ್ದರಷ್ಟೆ. ಆಗ ಉಂಟಾದ ಅಗ್ನಿಜ್ವಾಲೆಯು ಇನ್ನೂ ಉರಿಯುತ್ತಲೇ ಇರುವುದಂತೆ !

ಂ ಂ

ಸ್ವೀಡನ್ನಿನ ಮೂಲಕ ಜರ್ಮನಿಯ ಟ್ರಾಫಿಕ್ಕು ವಿಶೇಷವಾಗಿ ತಗ್ಗಿಹೋಗಿರುವದೆಂದೂ ಇನ್ನು ಕೆಲವು ದಿನಗಳಲ್ಲಿ ಅಲ್ಪವೂ ಪೂರ್ಣವಾಗಿ ನಿಂತುಹೋಗುವುದೆಂದೂ ಸ್ವೀಡಿಷ್ ವಾರ್ತೆಯು ತಿಳಿಸುತ್ತದೆ.

ತಯಾರಿಕೆ ಕಮ್ಮಿಯಾಯಿತು

ಮೇ ತಿಂಗಳಲ್ಲಿ ತಯಾರಾದ ಯುದ್ಧೋಪಯೋಗಿ ಸಾಮಾನುಗಳು ಏಪ್ರಿಲ್ ಗಿಂತ ಶೇಕಡ ಐದೂವರೆಯಷ್ಟು ಕಮ್ಮಿಯಾಗಿದೆಯೆಂದು ಅಮೇರಿಕಾ ಸರಕಾರದ ಹೇಳಿಕೆ. ಏರೋಪ್ಲೇನ್ ತಯಾರಿಕೆ ಮಾತ್ರ ಜೆನ್ನಾಗಿದೆಯಂತೆ ಮಿಕ್ಕಿರಿಗ ಟ್ಯಾಂಕಿಯಾ ಮತ್ತಿತರ ಭಾಗಗಳಲ್ಲಿ ಜಯಪ್ರದವಾದ ಖುಷಿಯೇ ಇದಕ್ಕೆ ಕಾರಣ.

ಂ ಂ

ಬಟ್ಟೇ ಗೋಳು ತಪ್ಪೀತೆ ?

ಅನೇಕರು ಒಬ್ಬೇಧಾರಾಳ ಇನ್ನೇನು ಕಮ್ಮಿಯಾಗುವುದೆಂದೂ ಚಾತಕಪಕ್ಷಿಯಂತೆ ಕಾದಿರುವರು ಈಗ ಭಾರತದಲ್ಲಿರುವ ಸರಕು 400 ರಿಂದ 1000 ಕೋಟಿಯಷ್ಟು ಜಾಸ್ತಿಯಾಗಿದೆ. ಸರಕಾರದವರು ಪರದೇಶಕ್ಕೆ ರಫ್ತು ಮಾಡುವದನ್ನು ಬಿಟ್ಟಿರೆ ಈಗಿನ ಧಾರಣೆಯಲ್ಲಿ ಶೇಕರ 30 ರಂತೆ ಧಾರಣೆ ಇಳಿಯಬಹುದೆಂದು ವಿಲ್ ಯೆಜಮಾನರು ಹೇಳುವರು.

ಂ ಂ

ಹೆನ್ರಿ ಕೇಜರರ ಯುಕ್ತಿ

ಈಗ ಅಮೇರಿಕಾದಲ್ಲಿ ಪ್ರತಿ ದಿವಸವೂ 45 ನೌಕೆಗಳನ್ನು ತಯಾರ್ಮಾಡುತ್ತಿರುವ ಹೆನ್ರಿ ಕೇಜರರು ಯುದ್ಧ ಮುಗಿದ ಮೇಲೆ ತನಗೆ ಈಗಿನಂತೆ ಕೆಲಸ ಸಿಕ್ಕಲಾರದೆಂದು ತನ್ನ ಕೆಲಸಗಾರರಿಗೆ ಮುಂದೆ ಕೆಲಸ ಕೊಡಲು ಒಂದು ಉಪಾಯವನ್ನು ಕಂಡುಹಿಡಿದಿದ್ದಾನೆ. ಪೂರ್ತಿ ಮನೆಯನ್ನು ಬೇರೆಬೇರೆ ಭಾಗವಾಗಿ ತಯಾರ್ಮಾಡುವುದು, ಇದನ್ನು ರೈಲಿನಲ್ಲಾಗಲೀ ವಿಮಾನದಲ್ಲಾಗಲೀ ಗಾಡಿಗಳಲ್ಲಾಗಲೀ ಸುಲಭವಾಗಿ ಸಾಗಿಸುವಂತೆ ಮಾಡುವನಂತೆ. ಅದರಿಂದ 1—2 ಗಂಟೆಗಳಲ್ಲಿ ಎಲ್ಲಿಬೇಕಾದರೂ ಮನೆಯನ್ನು ನಿರ್ಮಿಸಬಹುದಂತೆ. ಸಮುದ್ರ ತೀರದಲ್ಲಿ ವಾಸಿಸಲು ಅನುಕೂಲವಾಯಿತು. ಖಾಯಿಲೆಯವರು ಒಕ್ಕರವಾದ ಸ್ಥಳಗಳಲ್ಲಿ ಮನೆಕಟ್ಟಿಕೊಳ್ಳಬಹುದು, ಜಮೀನ್ದಾರರು ಸುಗ್ಗಿಕಾಲದಲ್ಲಿ ತಮ್ಮ ಜಮೀನುಗಳಲ್ಲಿ ಕಟ್ಟಿಕೊಳ್ಳಬಹುದು. ಬೆಲೆಯೂ ಸ್ವಲ್ಪವಂತೆ

ಈಚೆಗೆ ಒವರ್‌ಸೀಸಿಗೂ ಇಂಡಿಯಾಸಿಗೂ ಕೆಲವು ವಿಷಯಗಳಲ್ಲಿ ಮನಸ್ತಾಪವಿರುವುದೆಂದು ಹೇಳಲಾಗಿದೆ.

ಬ್ರಿಟಿಷ್ ನೂತನ ವಿಮಾನ

ಬ್ರಿಟಿಷರು ಈಗ ಒಂದು ಹೊಸ ತರಹ ವಿಮಾನವನ್ನು ತಯಾರಿಸಿದರು. ಇದರ ಹೆಸರು ಬ್ರಿಸ್ಟಲ್ ಬ್ಲೂಸೆಂಟಾರ್. ಪಂಚದಲ್ಲಿ ಇದಕ್ಕಿಂತ ಉತ್ತಮವಾದ ವಿಮಾನ ಒಂದಿಲ್ಲ ಇದು ಗಂಟೆಗೆ 330 ಮೈಲಿಯಂತೆ ಓಡಬಲ್ಲದು; ಆದರೆ 14 ಸಾವಿರ ಅಡಿ ಎತ್ತರದಲ್ಲಿ. ಒಂದುಸಲ ಎಣ್ಣೆಯನ್ನು ತುಂಬಿಕೊಂಡ 1500 ಮೈಲಿ ಹಾರಲಿದೆ. ಈಗ ಇದನ್ನು ಜರ್ಮನಿ ಕಡೆಯಲ್ಲಿ ಬಿಡುತ್ತಿರುವರು. ಇದೇ ಲಿಬಿಯ, ಇಂಗ್ಲೆಂಡಿನಲ್ಲಿ ಕೆಲಸವಾಡಿ ಖ್ಯಾತಿಗೆ ಬಂದಿದೆ.

ಂ ಂ

ಸಿನಿಮಾ ನಟಿಗಳ ಸಂಪಾದನೆ.

ಕೆ. ಬಿ. ಸುಂದರಂಬಾಳ್‌ರವರಿಗೆ ಇದುವರೆಗೆ ಹೆಚ್ಚಾಗಿ ಹಣ ಸಂದಾಯವಾಗಿದೆ. ಎಂ. ಎಸ್. ಸುಬ್ಬಲಕ್ಷ್ಮಿಯವರಿಗೆ ಪ್ರತಿಯೊಂದಕ್ಕೂ ಎಲ್ಲರಿಗಿಂತಲೂ ಹೆಚ್ಚಾಗಿ ಹಣ ಕೊಟ್ಟಹೊರ್ತು ಸಾಕ್ಷ ವಹಿಸುವುದಿಲ್ಲ. ಎಂ. ಕೆ. ಟಿ ಕನ್ನಂಬಾಯವರಿಗೆ ಪ್ರತಿಯೊಂದು ಪಿಕ್ಚರ್‌ಗೂ 30 ಸಾವಿರ ರೂಪಾಯಿ ಕೊಡಬೇಕು. ಎಂ ಕೆ. ಟಿ ಭಾಗವತರ್, ಪಿ. ವಿ. ಚಿನ್ನಪ್ಪ, ಟಿ. ಆರ್. ರಾಜಕುಮಾರಿ, ಕೆ ಎಲ್. ವಿ. ವಸಂತ, ಪುಷ್ಪವಲ್ಲಿ, ಕೃಷ್ಣನ್, ಮಧುರಂ ಇವರೆಲ್ಲರೂ ಹೆಚ್ಚಾಗಿ ಹಣ ಕೊಡದ ಹೊರ್ತು ಪಾರ್ಟ್ ಮಾಡುವವರಲ್ಲ.

ಂ ಂ

ಜಿಬ್ರಾಲ್ಟರಿನಲ್ಲಿ

ಈಗ ಜಿಬ್ರಾಲ್ಟರಿನಲ್ಲಿ ಮಿತ್ರರ 74 ನೌಕೆಗಳೂ, 1 ಯುದ್ಧ ಹಡಗು, 2 ಏರ್ ಕ್ರಾಫ್ಟ್ ಕ್ಯಾರಿಯರ್, 10 ಡಿಸ್ಟ್ರಾಯರ್ ಇರುವುದೆಂದೂ, ಅಮೇರಿಕಾದಿಂದ 8 ಸಾವಿರ ಸೈನು ಹಡಗುಗಳೂ, 3 ಡಿಸ್ಟ್ರಾಯರುಗಳೂ ಬಂದಿರುವುದೆಂದೂ ಗೊತ್ತಾಗಿದೆ.

ಂ ಂ

ಮ್ಯಾಜಿಸ್ಟ್ರೇಟರ ದಸ್ತಗಿರಿ

ಜೂನ್ 11 ರಲ್ಲಿ ಪಾಟ್ನಾದ ಸಬ್ ಮ್ಯಾಜಿಸ್ಟ್ರೇಟರು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ, ಅವರು ತಮ್ಮ ಹೆಂಡತಿಯನ್ನು ನೂಕಿದರೆಂದೂ, ಆಕೆಯು ನದಿಯಲ್ಲಿ ಬಿದ್ದು ಮುಳುಗುತ್ತಿದ್ದಾಗ ಯಾರೋ ಪುಣ್ಯಾತ್ಮರು ಆಕೆಯನ್ನು ಒದುಕಿಸಿದರೆಂದೂ, ಆಗಿನಿಂದ ಮ್ಯಾಜಿಸ್ಟ್ರೇಟರು ತಲೆತಪ್ಪಿಸಿಕೊಂಡಿದ್ದರೆಂದೂ, ಈಗ ಇವರು ಸಿಕ್ಕಿ ಪೀನಲ್ ಕೋಡು 307 ರ ಪ್ರಕಾರ ಪೋಲೀಸರ ವಶದಲ್ಲಿದ್ದಾರೆಂದೂ ತಿಳಿಯಬಂದಿದೆ.

ಸೀಮೆಎಣ್ಣೆ ಅಭಾವವೇ ಇಲ್ಲ.

ಅಮೆರಿಕಾ ಡ್ಯೂಪೌಂಟ್‌ಸ್ಟ್ಯಾರ್ಡ್ ನ್ಯೂಟ್‌ಡೆಸಿಂಗ್ ಕಂಪನಿಯವರ ಒಂದು ತರಹ ಒಣ್ಣವನ್ನು (ಪೇಂಟ್) ತಯಾರು ಮಾಡಿರುವರು ಈ ಒಣ್ಣವನ್ನು ಮನೆಯಲ್ಲಿ ಗೋಡೆಯಮೇಲೆ ಒಳಿದರೆ ರಾತ್ರಿ ಕಾಲದಲ್ಲಿ ಇದು ಥಳಥಳಿಸುತ್ತಾ ಬೆಳಕನ್ನು ಕಾರುವುದು, ದ್ವೀಪವನ್ನು ಹತ್ತಿಸುವ ಕೆಲಸ ತಪ್ಪಿಹೋಗುವುದು. ಸೀಮೆಎಣ್ಣೆಯನ್ನು ಕೊಳ್ಳುವ ಭಾರ ತಪ್ಪಿಹೋಗುವುದು.

ಂ ಂ

ಹೆಂಡತಿಯ ಖರೀದಿ

ಪಶ್ಚಿಮ ಆಫ್ರಿಕಾದ ಲಿಬ್ಬಿಯಾದಲ್ಲಿ ಒಬ್ಬ ಹೆಂಡತಿಯ ಕ್ರಯವು 15 ಪೌಂಡು

ಂ ಂ

ಜಿನ್ನಾರವರ ಮುಂಬಯಿ ಆಸ್ತಿ.

ಈಗ ಕೆಲವು ದಿವಸಗಳ ಕೆಳಗೆ ಮಿ|| ಜಿನ್ನಾರವರು ತಮ್ಮ ಮುಂಬಯಿ ಆಸ್ತಿಯನ್ನು ಮಾರಿ ತಮ್ಮ ಪಾಕಿಸ್ತಾನ್ ರಾಜಧಾನಿಯಾದ ಲಾಹೋರಿನಲ್ಲಿ ನೆಲೆಯಾಗಿ ನಿಲ್ಲಲು ಅಲ್ಲಿ ಆಸ್ತಿಪಾಸ್ತಿಗಳನ್ನು ಮಾಡಿಕೊಳ್ಳುವರೆಂದು ಒರೆದಿದ್ದುದನ್ನು ನಿಮ್ಮಿಂದ ಮಿ|| ಜಿನ್ನಾರವರು ಪ್ರಕಟಿಸಿದ್ದರು. ಈಗ ಮಿ|| ಜಿನ್ನಾರವರು ತಮ್ಮ ಮುಂಬಯಿ ಆಸ್ತಿಯನ್ನು ಪಾರಾವವರಾಗಿರುವರು. ಮನೆ ವಠವನ್ನು ಲಾಹೋರಿನಲ್ಲಿ ಮಾಡುವರು. ತಮ್ಮ ಬಳಿಯಲ್ಲಿರುವ ಯೂರೋಪಿಯರ್ ದರ್ಜಿಯವರು ಹೊಲೆದ 1003 ಸೂಟ್‌ಗಳನ್ನು ಮುಸಲ್ಮಾನ್ ಪದವಾಸಿ ಮತ್ತು ಪಾಜಾಮಿಗೂ ಬವಲಾಯಿಸುತ್ತಾರೋ?

ಂ ಂ

ಹೊಸ ವೈಸರಾಯರು

ಫೀಲ್ಡ್ ಮಾರ್ಷಲ್ ವೇವಲರನ್ನು ಮುಂದಿನ ವೈಸರಾಯಿ ಪದವಿಗೆ ನೇಮಿಸಿದ್ದುದರಿಂದ " ಭಾರತ ಸರಕಾರವು ಈಗ ಮಾರ್ಷಲ್ ಲಾ ದಂತಿರುವ ಆರ್ಡನೆನ್ಸುಗಳಿಂದ ನಡೆಯುತ್ತಿದೆ. ಇದೇ ರೀತಿಯಲ್ಲಿ ಸರಕಾರವು ನಡೆಯಬೇಕಾದರೆ ಮಿಲಿಟರಿ ಅಧಿಕಾರದಲ್ಲಿರುವದೇ ಒಳ್ಳೇದು " ಎಂದು ಬಂಗಾಳಾ ಕಾಂಗ್ರೆಸ್ ಪಾರ್ಲಿಮೆಂಟರಿ ಸದಸ್ಯರಾದ ಶ್ರೀ ಕಿರಣ್ ಶಂಕರ ರಾಯ್ ರವರು ಹೇಳಿರುವರು.

ಕುರ್ಸ್ಕ್ ರಣಕ್ಷೇತ್ರದಲ್ಲಿ ರಷ್ಯನ್ನರು ಹೇರಳವಾಗಿ ಸೇನೆಗಳನ್ನು ಶೇಖರಿಸುತ್ತಿರವರು. ಬೇಸಿಗೆಯಲ್ಲಿ ರಷ್ಯನ್ನರು ತಾವೇ ಜರ್ಮನರ ಮೇಲೆ ಬೀಳುವಂತಿದೆ. ನಾಜಿಗಳ ವಿಮಾನ ನಿಲ್ದಾಣಗಳು ಅನೇಕ ಕಡೆ ಅಗ್ನಿಗೆ ಆಹುತಿಯಾಗಿದೆ. ಹಿಟ್ಲರು ಮುಂದೆ ನುಗ್ಗದಂತೆ ರಷ್ಯನ್ನರು ಏರ್ಪಾಡನ್ನು ಮಾಡುತ್ತಿದ್ದಾರೆ,

ವಾರ್ತಾತರಂಗ

ಈಗ ಮಿತ್ರರಲ್ಲಿ 13–14 ಮಿಲಿಯ ಸೇನೆ ಇರುವುದು. ಇದರಿಂದ ಯೂರೋಪು ಮುತ್ತುವುದು ಸಾಧ್ಯವೆಂದು ರಷ್ಯನ್ನರ ಅಸೆ. ಬ್ರೀಷರು ಈಗ 2–3 ವಿಲಿಯ ಸೇನೆಯನ್ನು ಸುಲಭವಾಗಿ ರಣರಂಗಕ್ಕೆ ಬಿಡಬಹುದು ಈಗ ಮಾತ್ರ ತಿಂಗಳಿಗೆ 6000 ಟ್ಯಾಂಕ್, 10 ಸಾವಿರ ಗುಂಡ, 10–11 ಸಾವಿರ ವಿಮಾನ ತಯಾರ್ಮಾಡತವರು. ಜರ್ಮನಿಯು ತಿಂಗಳಿಗೆ 3–4 ಸಾವಿರ ಗುಂಡು, 4 ಸಾವಿರ ವಿಮಾನಗಳನ್ನು ಮಾತ್ರ ತಯಾರಿಸುವುದು. ಈಗ ಬ್ರಿಟಿಷ್ ಮತ್ತು ಅಮೇರಿಕಾ ಎಮ್ಮೆ ಶತ್ರುಗಳಿಗಿಂತ ಎರಡರಷ್ಟಕ್ಕಿಂತ ಹೆಚ್ಚಾಗಿ ಇಟ್ಟುಕೊಂಡಿರುವುವೆಂದು ರಷ್ಯಾ ಪತ್ರಿಕೆಗಳ ಅಭಿಪ್ರಾಯ.

ಂ ಂ

ಇಟಲಿಗೂ ಜರ್ಮನಿಗೂ ಮಧ್ಯೆ ಇರುವ ಬ್ರೆನ್ನರ್ ಕಣಿವೆ ಮಾರ್ಗವನ್ನು ಜರ್ಮನರು ಪ್ರಯಾಣಕ್ಕೆ ಬಂದು ಮಾಡಿರುವರು,

ಂ ಂ

ರಷ್ಯಾ ರಣಕ್ಷೇತ್ರದಲ್ಲಿ ಕಳೆದ ವಾರ ಜರ್ಮನರ 276 ವಿಮಾನಗಳು ನಷ್ಟವಾದವು, ರಷ್ಯಾದವರ ನಷ್ಟ 94 ಮಾತ್ರ.

ಂ ಂ

ತುರ್ಕಿಯ ದಕ್ಷಿಣ ಭಾಗದಲ್ಲಿ ಬ್ರಿಟಿಷ್ ಸೇನೆಯು ವಿಶೇಷವಾಗಿ ಶೇಖರಣೆಯಾಗಿದೆಯೆಂದು ರೋಂನಿಂದ ವರ್ತಮಾನ ಬಂದಿದೆ.

ಂ ಂ

ಗ್ರೀಸ್ ರಾಜ್ಯವನ್ನು ಮಿತ್ರರು ಮುತ್ತುವರೆಂದು ನಾಜಿಗಳು ಭಯಗ್ರಸ್ತರಾಗಿರುವರು.

ಂ ಂ

ಈ ವರ್ಷ ಯುದ್ಧಕ್ಕೆ ಅಮೇರಿಕಾ ಸರಕಾರವು 71510 ಮಿಲಿಯ ಡಾಲರುಗಳನ್ನು ವ್ಯಯ ಮಾಡುವುದು. ಇದುವರೆಗೆ ಇಷ್ಟು ಹಣವನ್ನು ಯಾರೂ ಖರ್ಚು ಮಾಡಿರುವುದಿಲ್ಲ.

ಂ ವ

ಯಾರೇ ಆಗಲಿ ಸ್ವೀಡ್ ದೇಶವನ್ನು ಮುತ್ತಿದರೆ ಅವರನ್ನು ಎದುರಿಸಲು ಸ್ವೀಡನ್ನಿನ ಸರಕಾರವು ಸಿದ್ಧವಾಗಿರುವುದೆಂದು ಹೇಳಲಾಗಿದೆ.

ಲೀಸ್ ಎಂಡ್ ಲೆಂಡ್ ಬಿಲ್ ಪ್ರಕಾರ ಅಮೇರಿಕಾದವರು ತಾವು ಇತರ ದೇಶಗಳಿಗೆ ಎರವು ಕೊಟ್ಟ ಪದಾರ್ಥಗಳಲ್ಲಿ ರಷ್ಯಾಕ್ಕೆ ನಾಲ್ಕರಲ್ಲಿ ಒಂದು ಭಾಗ ಸೇರಿದೆ. ಅಂದರೆ 197 ವರೆ ಮಿಲಿಯ ಪೌಂಡು ಬಾಳುವಷ್ಟು. ಇದನ್ನು 18 ತಿಂಗಳ ಅವಧಿಯಲ್ಲಿ ಕಳಿಸಿರುತ್ತಾರೆ. ಇದನ್ನು ನೋಡಿದರೆ ಅಮೇರಿಕಾದವರು ರಷ್ಯಾದ ವಿಷಯದಲ್ಲಿ ಎಷ್ಟು ಪ್ರೇಮವುಳ್ಳವರಾಗಿರುವರೆಂದು ಗೊತ್ತಾಗುವುದು.

ಂ ಂ

ಹಿಟ್ಲರ್ ರಷ್ಯಾ ದಂಡಯಾತ್ರೆಗೆ ಹೊರಟಾಗ 20 ಲಕ್ಷ ಸೇನೆಸಮೇತ ಹೊರಟನು. ಈಗ ರಷ್ಯಾದಲ್ಲಿ ಇವನ ಸೇನೆ 2 ಲಕ್ಷಕ್ಕೆ ಕಮ್ಮಿಯಿಡೆಯಂತೆ.

ಂ ಂ

ಭಾರತ ವೈಸರಾಯಿ ಪದವಿ ಫೀಲ್ಡ್ ಮಾರ್ಷಲ್ ವೇವಲ್‌ರವರಿಗೆ ಅದವ್ಯಕ್ತಿಗಿ ಲಂಡ್ಕ, ವಾಷಿಂಗ್‌ಟನ್ ಪತ್ರಿಕೆಗಳು ಇವರೇ ಸರಿಯಾದವರು ಎಂದು ಹೊಗಳಿ ಬರೆದಿವೆ.

ಂ ಂ

ಇಟಲಿ ದಕ್ಷಿಣಭಾಗದಲ್ಲಿ ಮಾರ್ಷಲ್ ಲಾ ಜಾರಿಗೆ ಬಂದಿದೆ.

ಂ ಂ

ಮದರಾಸ್ ಪಟ್ಟಣದಲ್ಲಿ ಆಂಗ್ಲೇಯರ ಹೋಟಲಿನಲ್ಲಿ ಅಕ್ಕಿ ಅಥವಾ ಅಕ್ಕಿ ಹಿಟ್ಟಿನ ಆಹಾರ ಪದಾರ್ಥಗಳನ್ನು ಉಪಯೋಗಿಸಬಾರದೆಂದು ಸರ್ಕಾರಿ ಆಜ್ಞೆಯಾಗಿದೆ.

ಂ ಂ

ಐಸಲೆಂಡಿನಲ್ಲಿದ್ದ ಅಮೇರಿಕ ಸೇನಾನಿಯನ್ನು ಇನ್ನೆಲ್ಲಿಗೋ ವರ್ಗವಾಡಿ ಬ್ರಿಟಿಷ್‌ನಲ್ಲಿ ಪೇ ಮಾಸ್ಟರ್‌ರಾಗಿದ್ದವರನ್ನು ನೇಮಿಸಿರುವರು.

ಂ ಂ

ಮೇ ತಿಂಗಳಲ್ಲಿ ಅಮೇರಿಕಾದವರು 7200 ವಿಮಾನಗಳನ್ನು ತಯಾರ್ಮಾಡಿರುವರು.

ಂ ಂ

ಹೋದ ತಿಂಗಳಲ್ಲಿ ಅಟ್ಲಾಂಟಿಕ್ ಸಾಗರದಲ್ಲಿ ಜರ್ಮನ್ ಸಬ್‌ಮೆರಿನಿಗೂ ಮಿತ್ರರ ನೌಕೆಗಳಿಗೂ 5 ದಿವಸ ಒಂದಾದ ಕದನ ನಡೆಯಿತು. ಶತ್ರುಗಳ 5 ಸಬ್‌ಮೆರೀನ್ ಮುಳುಗಿತು, ಮತ್ತು ಕೆಲವಕ್ಕೆ ತುಂಬ ಜಖಂ ಆಯಿತು. ಮಿತ್ರರ ಕಾನ್‌ವಾಯಿನಲ್ಲಿದ್ದ ಹಡಗುಗಳಲ್ಲಿ ಶೇಕಡ 97 ರಂತೆ ದಡವನ್ನು ಸೇರಿದವು.

ಂ ಂ

ಅಮೇರಿಕಾದಲ್ಲಿ ಈ ವರ್ಷ ಅಂತ್ಯದಲ್ಲಿ 65 ಲಕ್ಷ ಜನರನ್ನು ಸೇನೆಗೆ ಸೇರಿಸಿಕೊಳ್ಳುವರು.

ದೇಶಾಭಿಮಾನ ಸ್ವಾಭಿಮಾನ

ಇವುಗಳೆರಡರ ದೃಷ್ಟಿಯಿಂದಲೂ ಮೈಸೂರಿನವರಿಗೆ ಜೀವವಿಮೆ ಮಾಡಲು

ಮೈಸೂರು ಸರ್ಕಾರದ ಜೀವವಿಮೆ ಇಲಾಖೆಯ

ಪ್ರಜೆಗಳ ಶಾಖೆಯೇ ಅತ್ಯುತ್ತಮ ಸಂಸ್ಥೆ!

ವಿಮೆಯ ಮೊಬಲಗಿಗೆ ಸರ್ಕಾರದ ಹುಟ್ಟುನಳಿಯೇ ಆಧಾರ

ವಿಮೆಯಹಣವನ್ನು ಸ್ವಲ್ಪವೂ ಸಾವಕಾಶವಿಲ್ಲದೆ ಪಾವತಿಮಾಡಲಾಗುವದು

ವಿಮೆದಾರರಿಗೆ ಆಡಳಿತ ಸಮಯದಲ್ಲಿ ಪ್ರಾತಿನಿಧ್ಯವುಂಟು

ಸಾವಿರಕ್ಕೆ ಸಾಲಿಯಾನಾ ಇಪ್ಪತ್ತು ರೂ. ಗಳಂತೆ ಬೋನಸ್ ಹಂಚಿದೆ

ಹೆಚ್ಚು ವಿವರಗಳಿಗೆ ದಯವಿಟ್ಟು ಬರೆಯಿರಿ—

ಸೆಕ್ರೆಟರಿ,
ಮೈಸೂರು ಸರ್ಕಾರದ ಜೀವವಿಮೆ ಇಲಾಖೆ
ಬೆಂಗಳೂರು.

ಶ್ರೀ ಓಂ ಬ್ರಾಂಡ್ ಕೇಸರಿ

ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಅಕ್ಸೆಸರಿವಾದ ಪದಾರ್ಥವೂ ಸೇರಿಲ್ಲ; ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವಸ್ಥಾನಗಳಲ್ಲಿಯೂ ದೇವರ ಪೂಜೆಗೂ, ಔಷಧಿಗಳಿಗೂ ತಿಂಡಿ ಪದಾರ್ಥಗಳಿಗೂ ಸುಖ ಸಂತೋಷಕಾಲದಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ.

ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಪೊಂದಿದೆ.

ವಲ್ಲಭದಾಸ್ ತೇಜಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

ಉತ್ಕೃಷ್ಟವಾದ ಹಿಂಗು



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವು ರುಚಿಕರವಾಗಿದ್ದು, ಸಂಪೂರ್ಣ ಆರೋಗ್ಯವೂ ಸೌಖ್ಯವೂ ದೊರೆಯಲು

T.G. ಮಾರ್ಕಿನ ಹಿಂಗನ್ನು ಉಪಯೋಗಿಸಿ.

ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ಸಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದು, ಅರ್ಧ, ಕಾಲು ಪೌಂಡಿನ, ಒಂದು ಸೇರು, ಒಂದು ಪಲಮ್ ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ.

ನಮ್ಮ ಪರಿಮಳ ಅಡಿಕೆಪುಡಿಯು ಸುಪ್ರಸಿದ್ಧವಾದುದು.

ವಲ್ಲಭದಾಸ್ ತೇಜ್‌ಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಮದರಾಸು.

Opera — Aryamala — 7th Week

ಪಿ. ಯು. ಚಿನ್ನಪ್ಪ, ಸರೋಜಿನಿ, ಸಂತಾನಲಕ್ಷ್ಮಿ, ಶಕುಂತಲ ಕೃಷ್ಣ, ಮಧ್ವರಾ ಮುಂತಾದವರು ಪಾತ್ರವಹಿಸಿರುವರು

ಅಪೆರಾ ಟಾಕೀಸ್
ಆರ್ಯಮಾಲಾ ೭ನೇವಾರ

Ranjit Talkies

Krishna Sudhama

24—6—43 ರಿಂದ

ಅಚ್ಚುಮೆಚ್ಚಿನ ನಟನಟಿಯರು ಪಾತ್ರವಹಿಸಿರುವ ಮತ್ತು ಸಕಲರೂ ನೋಡತಕ್ಕ ಮಹೋನ್ನತ ಪೌರಾಣಿಕಚಿತ್ರ (ಕನ್ನಡ)

ಕೃಷ್ಣಸುಧಾವಮಣಿ

ರಣಜಿತ್ ಟಾಕೀಸಿನಲ್ಲಿ

ಪ್ರತಿದಿನ 3 ಆಟಗಳು

For good printing
Saraswati Printing Press
Lansdowne Buildings, Mysore

Lakshminarasimha Press
Srirampet, Mysore

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ಕೃಷ್ಣ ಸುಧಾ

ಸೇವನೆಯಿಂದ ರಕ್ತಕೊರತೆ, ಮಲಬಂಧ, ನರಗಳ ಅಶಕ್ತತೆ, ದೌರ್ಬಲ್ಯ, ನಿದ್ರಾಭಂಗ ನಿವಾರಣೆಯಾಗಿ, ಸಂಸಾರಸುಖಕ್ಕೆ ಅಪರಿಮಿತ ಶಕ್ತಿ ಲಭಿಸುವದು

ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ವಸ್ತುಪ್ರದರ್ಶನಗಳಲ್ಲಿ ಪಾರಿತೋಷಕವನ್ನು ಪಡೆದಿದೆ. ಬೆಲೆ 1 ರೂಪಾಯಿ